
ಕಾನನ
AUGUST 2011
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
W C G
© W C G



# ಕಾನನ

ನಿಸರ್ಗದೆಡೆಗೆ ಪಯಣ    AUGUST 2011

## ಲೇಖನಗಳು

* ಹಕ್ಕಿಲೋಕ - ನಾಗೇಶ್.ಓ.ಎಸ್
* ಗ್ಲೋರಿಯಸಾ ಸುಪರ್ಬಾ - ಶಂಕರಪ್ಪ.ಕೆ.ಪಿ
* ಗಿರಿಯ ಮುತ್ತು - ಶಂತನ್.ಕೆ.ಬಿ

ಅನಿಸಿಕೆಗೆ

E-mail: kaanana.mag@gmail.com

ಮುಖಪುಟ: ಗ್ಲೋರಿಯಸ ಸುಪರ್ಬ ಹೂ

© WCG

# ಸಂಪಾದಕೀಯ

ಜಿನಿಜಿನಿ ಎಂದು ಹನಿಯಿಕ್ಕುವ ಮಳೆ, ಮೋಡದಿಂದ ಆವೃತವಾದ ಬೆಟ್ಟಗಳ ಸಾಲು, ಮುಂಜಾವಿನ ಮಣ್ಜಿನ ಹನಿಗಳಿಂದ ತೊಯ್ದು ಸುಂದರವಾಗಿ ಅರಳಿದ ಕಾಡುಹೂಗಳ ಜೊತೆಗೆ ಹಾರಾಡುವ ಹೂಗಳ ಚಿಲಿಪಿಲಿಯ ಹಾಡು. ಸಾವಿರಾರು ಕೀಟಗಳ ಹಾರಾಟದ ಸದ್ದು. ಜಡದಂತೆ ಕಾಣುವ ಕಲ್ಲಿನ ಮೇಲು ಬೆಳೆಯುವ ಜೀವಂತ ಕಲ್ಲುಹೂ. ಹೀಗೆ ಜಡ ಮತ್ತು ಜೀವಿಗಳ ನಡುವೆ ಮಿಲಿಯಂತರ ವರ್ಷಗಳಿಂದ ಹಂಚಿಕೊಂಡು ಬದುಕುವ ಈ ಬೃಹತ್ ಜೀವವ್ಯಸ್ಥೆಯು, ಭೂಮಿಯೇ ಒಂದು ಜೀವಿಯಂತೆ ಭಾಸವಾಗುತ್ತದೆ.

ಮಳೆಗಾಲ ಪ್ರಾರಂಭವಾದರೆ ಕಾಡಿಗೆಲ್ಲಾ ಜೀವಕಳೆ ತುಂಬುತ್ತದೆ. ಹಲವು ಬಗೆಯ ಹೂಗಳು ಅರಳುತ್ತವೆ. ಹೀಗೆ ಅರಳಿದ ಸುಂದರವಾದ 'ಅಗ್ನಿಶಿಖೆ' ಹೂವಿನ ಬಗ್ಗೆ ಶಂಕರಪ್ಪರವರು 'ಗ್ಲೋರಿಯಸ ಸುಪರ್ಬ' ದಲ್ಲಿ ಗುಡ್ಡಗಾಡು ಜನರ ಜೀವನದ ಸಹಿತ ಬರೆದಿದ್ದಾರೆ.

ಮಲೆನಾಡಿನ ಮಳೆ ಹಾಗು ಅಲ್ಲಿನ ಜೀವವ್ಯವಸ್ಥೆಯಲ್ಲಿ ಹನಿ ಹನಿ ನೀರು ಸೃಷ್ಟಿಸುವ ಚಿತ್ತಾರವನ್ನು 'ಗಿರಿಯಮುತ್ತು'ವಿನಲ್ಲಿ ಶ್ರೀ ಶಂತನ್ ಕೆ.ಬಿ. ರವರು ಅದ್ಬುತವಾಗಿ ಚಿತ್ರಿಸಿದ್ದಾರೆ.

ಮಾನವ ಮತ್ತು ವನ್ಯಜೀವಿಗಳ ಆವಾಸದ ನಡುವೆ ತಳಮಟ್ಟದಲ್ಲಿ ನಡೆಯುತ್ತಿರುವ ಸಂಘರ್ಷವನ್ನು 'ರುದ್ರನ ಬೇಟೆ'ಯಲ್ಲಿ ಶ್ರೀ ನಾಗೇಶ್‌ರವರು ವರ್ಣಿಸಿದ್ದಾರೆ.

ವನ್ಯತೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ನಡೆದಿರುವ ಈ ನಮ್ಮ ಪುಟ್ಟ ಪ್ರಯತ್ನಕ್ಕೆ ಪ್ರೋತ್ಸಹಿಸಿದ ಸಕಲ ಗೆಳೆಯ ಮಿತ್ರರಿಗೆ **Wildlife Conservation Group** ನ ಪರವಾಗಿ ಅಭಿನಂದನೆಗಳು.

**ಕಾನನಕ್ಕೆ ನೀವು ಬರೆಯಿರಿ, ವನ್ಯಜೀವಿ ಹಾಗು ಪರಿಸರ ಸಂರಕ್ಷಣೆ , ವಿಜ್ಞಾನದ ಬಗ್ಗೆ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ಇ-ಮೇಲ್ ವಿಳಾಸ: kaanana.mag@gmail.com



# ಹಕ್ಕಿಲೋಕ

## * ಹುಂಡು ಕೋಳಿ (ರುದ್ರನ ಬೇಟೆ)

**ವೈಜ್ಞಾನಿಕ ಹೆಸರು:** *Amaurornis phoenicurus*
**ಇಂಗ್ಲೀಷ್ ಹೆಸರು:** **White breasted waterhen**



ವಾಜರಗುಡಿಸಲು ಎಂಬ ಹಳ್ಳಿಯಲ್ಲಿ ಯಾವುದೇ ಗುಡಿಸಲುಗಳು ಇಲ್ಲದ್ದಿದ್ದರೂ ಆ ಹಳ್ಳಿಯ ಪೂರ್ವಕ್ಕೆ ಕಂಠಪ್ಪನ ಕೆರೆ, ಪಶ್ಚಿಮಕ್ಕೆ ಒಡೆಯನಕೆರೆ ಎಂಬ ಬಹಳ ಹಳೆಯ ಕೆರೆಗಳಿವೆ. ಸುದ್ದಳ್ಳ ಲೇಕ್‌ರಿಸರ್ವ ಫಾರೆಸ್ಟಿನಲ್ಲಿ ಹರಿಯುವ ದೊಡ್ಡಳ್ಳಕ್ಕೆ ಮತ್ತು ಉಪ್ಪುನೀರಳ್ಳಕ್ಕೆ ಒಡೆಯನ ಕೆರೆಯೇ ಉಗಮಸ್ಥಳ. ಈ ಕೆರೆಯ ಕಟ್ಟೆಯ ಮೇಲೆ ಇರುವ ಒಂದು ದೊಡ್ಡ ಅತ್ತಿಯ ಮರ, ಮೂರು ತಿಂಗಳಿಗೊಮ್ಮೆ ಬಸಿರಾಗಿ ಲಕ್ಷಾಂತರ ಹಣ್ಣು ಬಿಟ್ಟು, ತನ್ಮೂಲಕ ಕೋಟ್ಯಾಂತರ ಅತ್ತಿ ಉಳಗಳಿಗೆ ಜನ್ಮನೀಡುತ್ತಾ, ನೂರಾರು ಕಾಡುಹಕ್ಕಿಗಳಿಗೆ ಹಣ್ಣು ನೀಡುತ್ತಾ, ಜನಕ್ಕೆ ನೆರಳಾಗಿ ಕೆರೆಗೆ ಆಸರೆಯಾಗಿ ನಿಂತು ಸಾರ್ಥಕವಾಗಿ ಜೀವಿಸುತ್ತಾ ಬಂದಿದೆ.

ಒಡೆಯನ ಕೆರೆಯಲ್ಲಿ ಹಗಲು ಸಾಕುಪ್ರಾಣಿಗಳು ಬಂದು ನೀರು ಕುಡಿದರೆ, ಕತ್ತಲಾಗುತ್ತಿದ್ದಂತೆ ಕಾಡಿನಿಂದ ಆಗಮಿಸುವ ಆನೆ, ಜಿಂಕೆಗಳು ಮೊದಲಾದ ಕಾಡುಪ್ರಾಣಿಗಳು ಬಂದು ನೀರುಕುಡಿದು, ನೀರಾಟವಾಡಿ ಹೋಗುತ್ತವೆ. ಬೆಳಗಾಗುತ್ತಿದ್ದಂತೆ ಆಗಮಿಸುವ ಕೊಕ್ಕರೆ, ಬಕ, ಮಿಂಚುಳ್ಳಿ, ಬಾತುಗಳು, ಉತ್ತುತ್ತಿಗಳು ನೀರಿನಲ್ಲಿ ಸಿಗುವ ಮೀನು ಹಾಗು ಕೀಟಗಳನ್ನು ತಿಂದು ತೇಗುತ್ತವೆ. ಒಟ್ಟಿನಲ್ಲಿ ಈ ಕೆರೆ ವಾಜರಗುಡಿಸಲಿನ ಜನಕ್ಕೆ ಮತ್ತು ಕಾಡುಪ್ರಾಣಿಗಳಿಗೆ ಬಹುಉಪಯೋಗಿ.

ಈಗಿರುವಾಗ ಲಕ್ಷೀಪುರದ ರುದ್ರನು ಸರಕಾರದಿಂದ ಒಡೆಯನ ಕೆರೆಯಲ್ಲಿ ಮೀನು ಸಾಕಲು ಟೆಂಡಾರ್ ಪಡೆದ. ಇಪ್ಪತ್ತು ಸಾವಿರ ಮೀನುಮರಿಗಳನ್ನೂ ಕೆರೆಗೆ ಬಿಟ್ಟ . ಮಾರನೆ ದಿನ ಮುಂಜಾನೆ ತನ್ನ ಡಬ್ಬಮೊಪೆಡ್‌ನಲ್ಲಿ ಕೆರೆಯ ಬಳಿ ಬಂದು ನೋಡುತ್ತಾನೆ. ಎಂದಿನಂತೆ ಆಗಮಿಸಿದ ಮಿಂಚುಳ್ಳಿ, ಕೊಕ್ಕರೆ, ಬಕಪಕ್ಷಿಗಳು ರುದ್ರ ಹತ್ತಾರು ಸಾವಿರ ಬಂಡವಾಳ ಹಾಕಿ ತಂದು ಬಿಟ್ಟಿದ್ದ ಮೀನು ಮರಿಗಳನ್ನು ಹಿಡಿದು ತಿಂದು ಚಿತ್ರನ್ನ ಮಾಡುತ್ತಿದ್ದನ್ನು ಕಂಡ ರುದ್ರನಿಗೆ ಬಹಳವಾಗಿ ಕೋಪ ಬಂದು ಅಲ್ಲಿಂದಲೇ ಕಲ್ಲೊಡೆದು ಕಿರಿಚಿ ಪಕ್ಷಿಗಳನ್ನು ಓಡಿಸಿದ. ಆದರೆ ಅವನು ನಾಸ್ಟಕ್ಕೆ ಓದಾಗ ಮತ್ತೆ ಎಲ್ಲಾ ಹಕ್ಕಿಗಳು ಹಾರಿ ಬಂದು ನಾಸ್ಟಮಾಡತೊಡಗುತ್ತಿದ್ದವು. ಇದರಿಂದ ಬೇಸತ್ತ ರುದ್ರನು ಕರಿಯನ ಕಳ್ಳಗನ್ನು ತಂದು ಹಗಲಿನಲ್ಲೇ, ಘನ ರಾಷ್ಟ್ರೀಯ ಉದ್ಯಾನವನದ ಸೇಫ್ ಝೋನ್‌ನಲ್ಲೇ ಬರುವ ಈ ಕೆರೆಯಲ್ಲಿ ಹಲವು ಹಕ್ಕಿಗಳ್ನು ನಿರ್ದಯವಾಗಿ ಚರೆ ತುಂಬಿದ ಗನ್ನಿನಿಂದ ಹೊಡೆದುರುಳಿಸಿ, ಬಾಡಿನ ರುಚಿ ಕಂಡ. ಹಲವು ದಶಕಗಳಿಂದ ಸ್ವಚ್ಛಂದವಾಗಿ ಜೀವಿಸುತ್ತಿದ್ದ ಹಕ್ಕಿಗಳ ಹಕ್ಕು ಗ್ರಾಮಪಂಚಾಯಿತಿಯು ಹಾಳೆಯ ಮೇಲೆ ಗೀಚಿದ ಟೆಂಡರ್‌ನಿಂದ ಬೀದಿಗೆ ಬಿದ್ದಿತ್ತು.

ಗನ್ನಿಗೆ ಸಿಗದೆ ನೀರಿನ ಝುಂಡುಲ್ಲಿನಲ್ಲಿ ಹುದುಗಿರುತ್ತಿದ್ದ ಹುಂಡುಕೋಳಿಗಳಿಗೆ ರುದ್ರನು ಬಲೆಯೊಡ್ಡಿದ. ಮರಿಗನ ಎಮ್ಮೆಗಳು ನೀರಿಗೆ ಬರದಂತೆ ನೀರ್ಭಂದಿಸಲು ದಡದ ಹಂಚಿನ ನೀರಿಗೆ ಲಂಟಾನ ಮುಳ್ಳು ಬರೆಗಳನ್ನು ಕತ್ತರಿಸಿ ನೀರಿಗೆ ಹಾಕಿಸಿದ. ಇದರಿಂದ ಮೊದಲು ಹಕ್ಕಿಗಳಿಗೆ ಈಜಲು ಕಷ್ಟವಾಗಿ ಮೀನು ಬೇಟೆಯಿಂದ ಹಿಂದೆ ಸರಿದಿದ್ದವೆಲ್ಲಾ ಮತ್ತೆ ಅತ್ತಿ ಮರದ ಮೇಲೆ ಬಂದು ಸೇರಿದವು. ರುದ್ರನು ಮತ್ತೆ ಅವುಗಳನ್ನು ಓಡಿಸಲು ಹಲವಾರು ಪ್ರಯತ್ನಗಳನ್ನು ಮಾಡಿತ್ತಿದ್ದ. ಹೀಗೆ ಒಂದು ಹುಂಡುಕೋಳಿಯನ್ನು ಓಡಿಸುತ್ತಿರಬೇಕಾದರೆ ಭಯದಿಂದ ಓಡುತ್ತಿದ್ದ ಹುಂಡುಕೋಳಿಯೊಂದು ಮುಂದೆ ಬಿಟ್ಟಿದ್ದ ಬಲೆಗೆ ಬಿದ್ದು ಸಿಕ್ಕಿಹಾಕಿಕೊಂಡಿತು. ಅದನ್ನು ಹಿಡಿದ ರುದ್ರ ಇವತ್ತು ಮನೆಯಲ್ಲಿ ಒಳ್ಳೆ ರುಚಿಯಾದ ಸಾರನ್ನು ಮಾಡಿಸಬೇಕೆಂದುಕೊಂಡು ಅಲ್ಲೆ ಅವನ ಗುಡಿಸಲಿನಲ್ಲಿದ್ದ ಗೋಣಿಚೀಲಕ್ಕೆ ಹಾಕಿಕೊಂಡು ತನ್ನ ಮೊಪೆಡ್ ಏರಿ ಮನೆಯಕಡೆ ಹೊರಟ.

ಬಸ್‌ಸ್ಟಾಂಡಿನಲ್ಲಿ ಹಳ್ಳಿಗೆಬರಲು ಬಸ್ಸಿಗೆ ಕಾಯುತ್ತಾ ಕುಳಿತಿದ್ದ ನನ್ನನ್ನು ಮತ್ತು ಅಶ್ವಥನನ್ನು ಕಂಡು

" ಏನ್ ಅಶ್ವತಪ್ಪ ಚೆನ್ನಾಗಿದ್ದಿಯೋ? ಎಲ್ಲಿ ಕಾಣ್ಸೆ ಇಲ್ಲ ಇತ್ತೀಚೆಗೆ ?."

ಎಂದು ಬಹಳ ಖುಷಿಯಿಂದ ಕೇಳಿದ. ಇನ್ನು ಬಸ್ಸು ಬರಲು ಬಹಳಷ್ಟು ಸಮಯವಿದ್ದುದ್ದರಿಂದ ನಾವು ಬೇಜಾರು ಕಳೆಯಲು ಇವನ ಜೊತೆ ಮಾತಿಗೆ ಇಳಿದೆವು. ನಮ್ಮ ಹಕ್ಕಿ ಪೊಟೊಗ್ರಪಿ ಮತ್ತು ಪಕ್ಷಿವೀಕ್ಷಣೆಯ ಬಗ್ಗೆ ರುದ್ರನೊಂದಿಗೆ ಮಾತನಾಡುತ್ತಿರಬೇಕಾದರೆ, ರುದ್ರ 'ನೀವೆಲ್ಲ ಕ್ಯಾಮರದಲ್ಲಿ ಹಕ್ಕಿ ಹಿಡಿದರೆ ನಾನು ನಿಜವಾದ ಹಕ್ಕಿಯನ್ನೆ ಹಿಡಿದಿದ್ದೇನೆ' ಎಂದು, ಈ ಹಾಳು ಹಕ್ಕಿಗಳಿಂದ ಅವನು ಅನುಭವಿಸುತ್ತಿರುವ ಕಸ್ಟಗಳನ್ನು ತೋಡಿಕೊಂಡು ತಾನು ಹಿಡಿದ ಹಕ್ಕಿಯನ್ನು ತೋರಿಸುತ್ತಾ

"ಏನಿಲ್ಲ ಇದನ್ನ ಮನೆಗೆ ಕೊಟ್ಟು ಬರನ್ನ ಅಂತ ಹೊರಟ್ಟಿದ್ದೀನಿ" ಎಂದಾಕ್ಷಣವೆ ಅಲ್ಲಿಯ ತನಕ ಇವರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಇದ್ದ ನಾನು

"ಎಲ್ಲಿ ಕೊಡು ನೋಡೋಣ" ಎಂದು ಅವನಿಗೆ ಇನ್ನು ಸ್ವಲ್ಪ ಹತ್ತಿರಕ್ಕೆ ಬಂದು

"ಅಲ್ಲೋ ರುದ್ರಣ್ಣ ಬದ್ಕದೆ ಇನ್ನಾ" ಎಂದು ಖುಷಿಯಿಂದಲೇ ಕೇಳಿದೆ.

"ಬಲೆಗೆ ಬಿದ್ದಿತ್ತು ಸಿಕ್ತು .ನೋಡು ಮೀನ್ ಮರಿಗಳು ನುಂಗಿ ನುಂಗಿ ಎಂಗದೆ" ಎಂದ.

ಚಿಕ್ಕಂದಿನಿಂದಲೂ ಹಕ್ಕಿಗಳನ್ನು ವೀಕ್ಷಿಸುತ್ತಾ ಬಂದಿದ್ದ ನಮಗೆ ಅವುಗಳ ರುಚಿ ಕಂಡಿದ್ದರೂ ಅವುಗಳ ಜೀವನಕ್ರಿಯೆಗಳನ್ನು ಸ್ವಲ್ಪ ಅರಿತ ಮೇಲೆ ಅವುಗಳ ಮಾಂಸಕ್ಕಿಂತಲೂ ಅವುಗಳ ಕೂಗಾಟ, ಹಾರಾಟವೇ ಹೆಚ್ಚು ಪ್ರಿಯಕರವಾಗಿತ್ತು.

ಇದನ್ನು ಜೀವಂತವಾಗಿ ಕಂಡ ನಮಗೆ ಇದನ್ನು ಹೇಗಾದರೂ ಮಾಡಿ ರುದ್ರನ ಕೈಯಿಂದ ರಕ್ಷಿಸಬೇಕು ಎನ್ನಿಸಿತು. ಅಷ್ಟರಲ್ಲಿ ನನ್ನ ಜೊತೆ ಹಕ್ಕಿಯನ್ನು ನೋಡುತ್ತಿದ್ದ ಅಶ್ವಥನು ಕೈಯಲ್ಲಿ ಹಿಡಿದಿದ್ದ ಚೀಲವನ್ನು ಕೊಟ್ಟುಬಿಟ್ಟು

"ರುದ್ರಣ್ಣ ಒಳ್ಳೆ ಕೊಬ್ಬಾಗದೆ ಎಷ್ಟ್ ಕೇಜಿ ಬರಬಹುದು ಇದು?"

"ಊ ಬಾರಿ ಕೊಬ್ಬಾಗೆ ಅದೆ ಅಮ್ಮಮ್ಮಾ ಅಂದ್ರೆ ಒಂದು ಕೆಜಿ ಬರಬಹುದು ಬರ್‌ಬೋದು." ಎಂದು ಚೀಲವನ್ನು ಕೈಯಿಂದ ತೂಕಮಾಡಿ ಹೇಳಿದ.

"ಸರಿ ಇದನ್ನು ನೀನು ಯಾವಾಗ್ಲಾದ್ರು ತಿಂದಿದ್ಯ?" ಎಂದು ನಾನು ರುದ್ರನನ್ನು ಪ್ರಶ್ನಿಸಿದೆ

"ಓ ಸುಮಾರ್ ಸಾರಿ ತಿಂದಿದ್ದೀನಿ ಒಳ್ಳೆ ರುಚಿ ಮಾಂಸ ಮಾತ್ರ" ಎಂದು ಖುಷಿಯಿಂದ ಉತ್ತರಿಸಿದ.

"ಲೊ ರುದ್ರಣ್ಣ ನಾವ್ ಯಾವತ್ತೂ ಇದರ ಮಾಂಸ ತಿಂದಿಲ್ಲ ನಮಗೆ ಇದನ್ನು ಕೊಡ್‌ತೀಯ ನಿನ್ ಕೇಳ್‌ದಷ್ಟು ಕಾಸ್ ಕೊಡ್ತಿವಿ, ಏನ್ ಅಂತೀಯಾ" ಎಂದು ಅಶ್ವಥನು ಬಾಲನಿಗೆ ಕೇಳಿದ.

ಮೊದಮೊದಲು ರುದ್ರನು ನಿರಾಕರಿಸಿದನಾದರೂ ನಮ್ಮ ಒತ್ತಾಯಕ್ಕೆ ಮತ್ತು ಅವನಿಗೆ ದುಡ್ಡು ಸಿಕ್ಕರೆ ಕುಡಿಯಲಿಕ್ಕೂ ಮತ್ತು ಮಾಂಸಕ್ಕೆ ಎರಡಕ್ಕೂ ಆಗುತ್ತದೆ ಎಂದು ಯೋಚಿಸಿ ಐವತ್ತು ರುಪಾಯಿಗೆ ಕೊಡಲು ಒಪ್ಪಿದ. ನಾವು ನಮ್ಮ ಬಳಿ ಇದ್ದ ಐವತ್ತು ರೂಪಾಯಿಯನ್ನು ಕೊಟ್ಟು ಹುಂಡುಕೋಳಿಯನ್ನು ಅವನಿಂದ ಕೊಂಡುಕೊಂಡೆವು. ದುಡ್ಡು ತೆಗೆದುಕೊಂಡ ರುದ್ರನು ನಮಗೆ ಬರುತ್ತೇನೆ ಎಂದು ಹೇಳಿ ಮನೆಯ ಕಡೆ ಹೊರಟ. ಅವನು ನಮ್ಮಿಂದ ಕಣ್ಮರೆಯಾಗುವ ತನಕ ಕೈಯಲ್ಲಿ ಇಡಿದಿದ್ದ ಕೋಳಿಯನ್ನು ಅಲ್ಲೆ ಸ್ವಲ್ಪ ದೂರದಲ್ಲಿದ್ದ ಗದ್ದೆಗೆ ತೆಗೆದುಕೊಂಡು ಹೋಗಿ ಬಿಟ್ಟ ಬಂದೆವು. ಅದರ ಒಂದು ರೆಕ್ಕೆಯನ್ನು ಮಾತ್ರ ಮುರಿದು ಬಿಟ್ಟಿದ್ದ ರುದ್ರ!.

ಈ ಹುಂಡುಕೋಳಿಗಳು ಸಾಮಾನ್ಯವಾಗಿ ಕೆರೆ ಮತ್ತು ಜೌಗು ಪ್ರದೇಶದಲ್ಲಿ ಕಾಣಸಿಗುವ ಪಕ್ಷಿಗಳು. ಇವು ಹೆಚ್ಚು ಎತ್ತರಕ್ಕೆ ಹಾರದೆ ನೆಲದ ಮೇಲೆ ಆಹಾರವನ್ನು ಹುಡುಕುತ್ತಾ ನಡೆಯುತ್ತವೆ. ಇವು ಜೂನ್ ಮತ್ತು ಅಕ್ಟೋಬರ್ ತಿಂಗಳುಗಳ ನಡುವೆ

ಕಡ್ಡಿಗಳಿಂದ ಕೂಡಿದ ಬಟ್ಟಲಿನಾಕಾರದ ಗೂಡನ್ನು ಕಟ್ಟಿ ಕೆಂಪು ಚುಕ್ಕೆಗಳಿರುವ ಆರು ಅಥವಾ ಏಳು ಮೊಟ್ಟೆಗಳನ್ನು ಇಟ್ಟು ಇಪ್ಪತ್ತು ದಿನಗಳವರೆಗೆ ಕಾವು ಕೊಟ್ಟು ಮರಿಮಾಡುಡುತ್ತವೆ. ಇವು ನಮ್ಮ ರಾಜ್ಯದಲ್ಲಿ ಎಲ್ಲಾಕಡೆ ಕಾಣಸಿಗುತ್ತವೆ.







# ಗ್ಲೋರಿಯಸಾ ಸುಪರ್ಬಾ

ನೂರನಾಲ್ಕು ಚದುರ ಕಿಲೋಮೀಟರ್ ವಿಸ್ತೀರ್ಣವುಳ್ಳ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಅತಿ ಎತ್ತರವಾದ ಸ್ಥಳವೆಂದರೆ ನಮ್ಮೂರಿನ ದಕ್ಷಿಣಕ್ಕಿರುವ, ಸಮುದ್ರ ಮಟ್ಟದಿಂದ ಸಾವಿರದ ಮುವತ್ತೈದು ಮೀಟರ್ ಎತ್ತರದ ದೊಡ್ಡರಾಗಳ್ಳಿಬೆಟ್ಟ!. ಈ ಬೆಟ್ಟದ ಸುತ್ತಲೂ ಬಹಳ ನಿಭಿಡವಾದ ಎತ್ತರದ ಕಾಡುಮರಗಳಿವೆ. ಅಲ್ಲಿಯೇ ಎರಡು ಮೂರು ಸಣ್ಣ ಸಣ್ಣ ಕೆರೆಗಳಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ನೀರಿರುವುದರಿಂದ " ಕಳ್ಳಬೇಟೆಗಾರರ ಕಣ್ಣಿಗೆ ತಪ್ಪಿಸಿಕೊಂಡು, ಉಸಿರಾಡಿಕೊಂಡಿರುವ ಎಲ್ಲೋ ಕೆಲವು ಕಾಡುಪ್ರಾಣಿಗಳು ಕಾಣಸಿಕ್ಕರೆ ನಮ್ಮ ಅದೃಷ್ಟ", ಆದರೂ ಅಲ್ಲಿನ ವನಸೌಂದರ್ಯವು ಮಳೆಗಾಲದಲ್ಲಿ ನಮ್ಮನ್ನು ಸೆಳೆಯುತ್ತದೆ.



ದೊಡ್ಡರಾಗಳ್ಳಿಬೆಟ್ಟ, ಬೆಟ್ಟದ ತಪ್ಪಲಲ್ಲಿ ಕಾಣಸಿಗುವ ಕಾಡುಹೂಗಳು ಹಾಗು ಹಾರಾಡುವ ಹೂಗಳನ್ನು ನೋಡಲು ನಾನು ಹಾಗು ನನ್ನ ಕಾಡುಗುರು ಟ್ರೈಬಲ್-ಥೀಫ್ ಸುಮಾರು ಅರವತ್ತು ಪ್ರಾಯದ ಸಿದ್ದಪ್ಪನೂ ಹೊರಟೆವು. ಸಿದ್ದ ತನ್ನ ಜೊತೆಗೆ ಅವನ ಮೊಮ್ಮೊಗನಾದ ಕುಳ್ಳೀರನನ್ನು ಕರೆತಂದಿದ್ದ. ಕುಳ್ಳೀರ ತನ್ನ ಹೆಸರಿಗೆ ವಿರುದ್ಧರ್ಥವಾಗಿ  ಆರಡಿ ಬೆಳೆದಿದ್ದರೂ ಎಲ್ಲರೂ ಅವನ್ನನ್ನು ಕುಳ್ಳೀರನೆಂದೇ ಸಂಬೋದಿಸುತ್ತಿದ್ದರು.

ಈ ಕಾಡಿನಲ್ಲೇ ಹುಟ್ಟಿ ಬೆಳೆದ ಸಿದ್ದನನ್ನು ಕಾಡುಸಿದ್ದಪ್ಪನೆಂದೇ ಕರೆಯುವರು. ಕಾಡಿನ ಬಗ್ಗೆ ಕಾಡುಸಿದ್ದಪ್ಪನಿಗಿರುವ ಜ್ಞಾನ ಅಪಾರ. ಇದು ಅವನ ಜೊತೆ ಒಡನಾಡಿದವರಿಗೆ ಮಾತ್ರ ತಿಳಿಯುತ್ತದೆ. ಕಿರುಲು ದನಿಯಲ್ಲಿ ಮಾತಾನಾಡುತ್ತಾನಾದರು ಅದರಲ್ಲಿ ನಿಸರ್ಗದತ್ತವಾದ ಸೊಗಸಿರುತ್ತದ್ದೆ. ಇರುಳರ ಸೊಗಡಿರುತ್ತದೆ. ಸಿದ್ದ ನೂರಾರು ಕಾಡುಗಿಡಗಳನ್ನು ಗುರುತಿಸಿ ಲೀಲಾಜಾಲವಾಗಿ ಹೆಸರಿಸಿ ಹೇಳಬಲ್ಲ. ಕೇವಲ ಗಾಳಿಯನ್ನೇ ಮೂಸಿ ವಾಸನೆಯಿಂದಲೇ ಕಾಡಾನೆಗಳ ಇರುವನ್ನು ಅರ್ಧ ಕಿಲೋಮೀಟರ್ ದೂರ ದಿಂದಲೇ ಗುರುತಿಸಬಲ್ಲ. ಒಂದೊಂದು ಹುಲ್ಲುಕಡ್ಡಿಯೂ, ಅಲುಗಾಡುವ ಎಲೆಯು, ಲಟಕ್! ಎಂದ ಕಡ್ಡಿಯ ಶಬ್ದವೂ, ಕಾಡುಪ್ರಾಣಿಗಳ ಇರುವನ್ನು ಮತ್ತು ಅವುಗಳ ಜಾಡನ್ನು ಇವನಿಗೆ ಕತೆ ಹೇಳುತ್ತಿದ್ದವು.

ಗರಡುಗಂಬದಳ್ಳದಲ್ಲಿ ಹಾಲಿನಂತೆ ಬೆಳ್ಳಗೆ ಹರಿಯುತ್ತಿದ್ದ ಶುಭ್ರವಾದ ಬಿಳಿ ನೀರನ್ನು ಕಂಡು ಕುಳ್ಳೀರನು "ಅಯ್ಯೋ ಯಾರೋ ಹಾಲ್ ಚೆಲ್ಬಿಟ್ಟವರೇ.. . ." ಎಂದಿದ್ದಕ್ಕೆ ಸಿದ್ದನು
'ಕೋತಿ ನನ್ಮಗನೇ! ನೀರು ಕಣೋ ಅದು!'
ಎಂದು ಶಹಬಾಷ್ ಕೊಟ್ಟ.

ಹಳ್ಳದಲ್ಲಿ ಹಲವು ಪಕ್ಷಿಗಳು ಚಿಲಿಪಿಲಿಗುಟ್ಟುತ್ತಿದ್ದರಿಂದ ಅವುಗಳನ್ನು ನನ್ನ ಬೈನಾಕುಲರ್‌ನಲ್ಲಿ ನೋಡುತ್ತಾ ಸಾಗಿ, ಜಾರುಕಲು ಬಂಡೆ ಹಳ್ಳವನ್ನು ಮುಟ್ಟಿದೆವು. ಹಳ್ಳಕ್ಕೆ ಅಡ್ಡಲಾಗಿ ಮಲಗಿದ್ದ ಕೆಂಪುಕಲ್ಲಿನ ಬಂಡೆಯ ಮೇಲೆ ಸಾವಿರಾರು ವರ್ಷಗಳಿಂದ ನೀರು ಹರಿದುಹರಿದೂ ಸವೆಸಿ ಸವೆಸಿ ನೈಸರ್ಗಿಕವಾಗಿ ಪಾಲಿಶ್ ಕೊಟ್ಟು ನೈಸು ಮಾಡಿದ್ದ ಜಾರುಕಲುಬಂಡೆಯ ಮೇಲೆ ಜಾರದಂತೆ ಎಚ್ಚರಿಕೆಯಿಂದ ಹೆಜ್ಜೆಯಿಡುತ್ತಾ ಸಾಗುವಾಗ, ನಮ್ಮ ತಲೆಯ ಮೇಲೆ ಹಾರಿದ **'Plum headed Paraket'** ಗಳ ಗುಂಪನ್ನು ನೋಡಲು ತಲೆಯನ್ನು ಮೇಲೆ ಎತ್ತಿದ ಕುಳ್ಳೀರ ಜಾರಕಲು ಬಂಡೆಯ ಮೇಲಿಂದ ಜಾರಿ ನೀರಿಗೆ ಬಿದ್ದ!.

ನಾನು "ನೋಡಿದೆಯೇನೋ ಗಿಳಿಗಳು ಎಂದೆ?!"
ಕುಳ್ಳೀರ ಮುಖ ಉದಿಸಿಕೊಂಡು 'ಹ್ಞೂ. . !' ಎಂದ. ತನ್ನನ್ನು ನೀರಿಗೆ ಜಾರಿಬೀಳುವಂತೆ ಮಾಡಿದ ಗಿಳಿಗಳನ್ನು ಬಯ್ಯುತ್ತಾ .. ನೀರಿನಲ್ಲಿ ನೆನೆದು ಮುದ್ದೆಯಾಗಿದ್ದ ಬಟ್ಟೆಗಳನ್ನು ಕೊಡವಿಕೊಳ್ಳುತ್ತಿದ್ದಾಗಲೇ ನಾನು ಗಮನಿಸಿದ್ದು ಅವನ ಜೋಬಿನಲ್ಲಿದ್ದ, ನಾನು ಬಹಳ ದಿನದಿಂದ ಫೋಟೊ ತೆಗೆಯಲು ಹುಡುಕುತ್ತಿದ್ದ **'Gloriasa suparba'** ಹೂ.
'ಎಲ್ಲಿ ಕಿತ್ತ್ಯೋ ಇದು?' ಎಂದೆ
'ಅಲ್ಲಿ!' ಎಂದು ಮೆಲಕ್ಕೆ ಕೈ ಮಾಡಿತು!.
ಮತ್ತೆ ನಾನು ಎಲ್ಲಿ? ಎನ್ನುವಷ್ಟರಲ್ಲಿ ಸಿದ್ದ ಮಧ್ಯ ಬಂದು "ಇದ ಸ್ವಾಮಿ, ಕುರಡಿಕಣ್‌ಗೆಡ್ಡೆದು ಹೂವ್ವ, ಗೌರಿಹಬ್ಬದ್ ಸಮೇವ್ಕ್ಕ ಕರಟ್ಟಾಗಿ ಹೂವ್ವ ಬಿಡತದೆ, ಇದರ ಗೆಡ್ಡೆನಾಗ ಕಣ್ಣಿರ್ತದೆ, ಮೂಲಂಗಿತರ ಬಿಳಿಗೆಡ್ಡೆಗಳು ಎರಡ್ರಿತಾವೆ" ಎಂದು ತನ್ನ ಕೈಯಿನ ತೋರು ಬೆರಳು ಹಾಗು ಮಧ್ಯದ ಬೆರಳನ್ನು ಪ್ಲಮ್ಮಿಂಗನ ಬಲಗೈ ನಿಯಮದಂತೆ **'V'** ಆಕಾರ ಮಾಡಿ ತೋರಿಸಿದ. ಇದರ ಗಿಡ ಫೋಟೊ ತಗಿಬೇಕು ಎಂದಿದ್ದಕ್ಕೆ, "ಈಗ ಮೋಸ್ತಾಗಿ ಸಿಗ್ತವೆ ಬನ್ನಿ ತೋರ್ಸ್ತಿನಿ, ನಡಿರಿ ಸ್ವಾಮೇ ತೊರಿಸ್ತೀನಿ" ಎಂದು ಮುನ್ನೆಡಿಸಿದ. ದಾರಿಯಲ್ಲಿ ಬರುವಾಗ ದೂರಕ್ಕೆ, ಹಸಿರು ಬೇಲಿಗೆ ಯಾರೋ ಈಗ ತಾನೆ ಬೆಂಕಿಯಿಟ್ಟಂತೆ, ಉರಿಯುವ ಜ್ವಾಲೆಯಂತೆ ಕೆಂಪಗೆ ಸುಮಾರು ಹತ್ತು ಹದಿನಾರು **'Gloriasa suparba'** ಹೂಗಳು ಒಂದೇ ಗಿಡದಲ್ಲಿ ಕಂಡವು.



ಇಂಗ್ಲೀಷ್ ನಲ್ಲಿ **'Gloriasa suparba'** ಎಂಬ ಹೆಸರು ಹೂವಿಗೆ ತಕ್ಕಂತಾ ಸುಂದರವಾದ ಹೆಸರು. ಆದರೆ ಆರಡಿ ಉದ್ದವಿರುವ ಮೊಮ್ಮಗನಿಗೆ ಕುಳ್ಳೀರ ಎಂದು ಹೆಸರಿಟ್ಟಿರುವ ಸಿದ್ದನಂತವರು ಕನ್ನಡದಲ್ಲಿ ಇಷ್ಟು ಸುಂದರವಾದ ಹೂವನ್ನು ಬಿಟ್ಟು ಅದರ ಗೆಡ್ಡೆಗೆ ಮನಸೋತು ಈ ಗಿಡಕ್ಕೆ ಕರಡಿಕಣ್ಣಿನಗೆಡ್ಡೆ, ಕಣ್ಣೋವ್ವಿನಗಿಡ ಎಂದು ನೀರಸವಾದ ಹೆಸರಿಟ್ಟಿದ್ದಾರೆ.

ಲಿಲ್ಲಿಯೇಸಿ ಪ್ರಧಾನ ಜಾತಿಗೆ ಸೇರಿದ ಈ ಗಿಡ ಮೂರರಿಂದ ಆರು ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಸಣ್ಣಗೆ ಬಳ್ಳಿಯಂತೆ ಬೆಳೆಯುವ ಇದಕ್ಕೆ ಕಾಂಡದುದ್ದಕ್ಕೂ ಅರ್ಧ ಅಡಿಗೊಂದು ಗೆಣ್ಣು, ಗೆಣ್ಣಿಗೊಂದು ಎಲೆಯಿರುತ್ತದೆ. ನೀಳವಾದ ಎಲೆಯ ತು

ದಿಯು ವೊನೆಯು ಏಕ್ದಂ ಸುರಳಿಸುತ್ತಿಕೊಂಡು ಬಿಳಲುಬೇರುಗಳಂತೆ ಸಹಾಯಕವಾಗಿವೆ. ಹೂವಿನ ಆರುದಳಗಳ ಹೂ ಹರಳಿದಾಗ ಕನ್ನಡದ ಬಾವುಟದ ಬಣ್ಣದಂತೆ ಹಳದಿ–ಕೆಂಪುಗಿದ್ದು, ವಂಕಿ ವಂಕಿಯಾಗಿ ಮುದುಡಿರುತ್ತವೆ ಹಾಗು ಅಂಡಾಶಯ ಮತ್ತು ಕೇಸರಗಳು ಅನಾವರಣಗೊಂಡಿರುತ್ತವೆ. ಪರಾಗಸ್ಪರ್ಷಕ್ರಿಯೆ ಆದ ನಂತರ ದಳಗಳು ಕೆಂಪಗಾಗಿ ಹಿಂದಕ್ಕೆ ಮಡಚಿಕೊಳ್ಳುತ್ತವೆ. ಇದರ ಗೆಡ್ಡೆ ಬಹಳ ವಿಷವಿರುವುದರಿಂದ ಯಾವ ಪ್ರಾಣಿಯೂ ತಿನ್ನವು. ಒಟ್ಟಿನಲ್ಲಿ ಹೂ ನೋಡಲು ಬೇರೆಯ ಹೂಗಳಿಗಿಂತ ಬಹಳ ಬೇರೆಯಾಗಿಯೇ ಎತ್ತರದಲ್ಲಿ ನಿಲ್ಲುತ್ತದೆ.



ಇದರ ಔಷದೀಯ ಗುಣಗಳ ಬಗ್ಗೆ ವಿವರಿಸುತ್ತಾ ಸಿದ್ದಪ್ಪ “ ಈ ಗೆಡ್ಡೆಗೆ ಬೆಲೆ ಅದೇ ಸ್ವಾಮಿ, ವೊನ್ನೇ ತಾನೆ ತಟ್ಟೆಕೆರೆ ತಾವ ಹತ್ತು ಕೇಜಿ ಗೆಡ್ಡೆ ಕಿತ್ತಿದ್ರು ನಂ ಬಾವ್ಮೈಕ್ಳು. ಯಾರೋ ಟೆಮಿಳ್‌ನಾಡ್ ಕಡೆರು ಕಾರಾಗ್ ಬಂದು, ಕೇಜಿಗೆ ನ್ನನ್ನೂರಂಗೆ ಕೊಟ್ಟು ತಕ್ಕೊಂಡು ಹೋದ್ರಂತೆ. ಅದೇನೋ ಔಸ್ದಿನೋ, ಅಸೀಡ್ಡೋ ಮಾಡ್ತಾರಂತೆ ಇದರಿಂದ. ಎಂದು ಹೇಳಿದ, ಆಗಲೇ ನನಗೆ **‘Gloriasa suparba’**ದ ಸಂತತಿ ಏಕೆ ಕ್ಷೀಣಿಸುತ್ತಿದೆ ಎಂದು ಗೊತ್ತಾಗಿದ್ದು!.



# ಗಿರಿಯ ಮುತ್ತು



ನಾನು ಉಡುಪಿಯಲ್ಲಿ ಇದ್ದಾಗ ವಾರಕ್ಕೋ, ಹದಿನೈದು ದಿವಸಕೊಮ್ಮೆಯೋ ನನ್ನ ತವರಾದ ಶಿವಮೊಗ್ಗಗೆ ಹೋಗುತ್ತಿದ್ದೆ. ಪಯಣವು ಕೇವಲ ನಾಲ್ಕು ತಾಸಿನದಾದರೂ ಮೈಯೆಲ್ಲಾ ಹಣ್ಣಾಗಿಸುತ್ತಿತ್ತು. ಆದರೂ ಅಲ್ಲಿಯ ವನಸಿರಿ ಸ್ವಚ್ಛವಾದ ಗಾಳಿ ಮನಸನ್ನು ಉಲ್ಲಸಿತಗೊಳಿಸುತ್ತಿದ್ದವು. ನನ್ನ ಆ ಸ್ಥಳಗಳಿಗೆ ಪದೇ ಪದೇ ಭೇಟಿಕೊಡಲು ಪ್ರೇರಿಸುತ್ತಿದ್ದವು.
ನಾನು ನನ್ನ ತಮ್ಮ, ಸ್ನೇಹಿತರಾದ ಪವನ್, ಸುಹಾಸ್, ರವಿಪ್ರಕಾಶ್ ಎಲ್ಲ ಆ ಕಾಡುಗಳಲ್ಲಿ ಸುತ್ತಿದ್ದೇವೆ. ಸೀತಾನದಿಯ ಮಡಿಲಲ್ಲಿ ಓಡಾಡಿದ್ದೇವೆ. ಅವಳ ಸ್ಪಟಿಕ ಶುಭ್ರವಾದ ನೀರನ್ನು ಆಸ್ವಾದಿಸಿದ್ದೇವೆ. ಅಲ್ಲಿಯ ವಾತಾವರಣದಲ್ಲಿ ಅದೆಂಥಾ ಶಕ್ತಿ ಇದೆ ಅಂದ್ರೆ ಕೆಲವು ದಿನಗಳ ಹಿಂದೆ ನಮ್ಮ ಸ್ನೇಹಿತರ ಮದುವೆಗೆ ಹೋದವರು ಈ ಸ್ಥಳಗಳಿಗೆ ಭೇಟಿ ಕೊಡುವುದೆಂದು ಯೋಜನೆ ಹಾಕಿಕೊಂಡಿದ್ದೆವು .ನನಗೆ ಅತಿಯಾದ ಕೆಲಸ ಮತ್ತು ಪ್ರಯಾಣದ ಆಯಾಸ ಎರಡೂ ಸೇರಿ ಉಡುಪಿ ತಲುಪುವುದರಲ್ಲಿ ಜ್ವರ ಏರಿತ್ತು .

ಆದಾಗಲೇ ಸ್ನೇಹಿತರೆಲ್ಲಾ ಒಟ್ಟುಗೂಡಿದ್ದರಿಂದ ಮತ್ತು ಅ ಸ್ಥಳಗಳನ್ನು ನೋಡುವ ಅತೀವ ಹಂಬಲವಿದ್ದುದರಿಂದ ಆದದ್ದಾಗಲಿ ಎಂದು ಹೊರಟೆ .

ಆ ದಿನ ನಾವು ಸರಿಸುಮಾರು ಎಂಟು– ಹತ್ತು ಕಿಲೋಮೀಟರ್‌ಗಳ ಕಾಲ್ನಡಿಗೆ ಮಾಡಿದ್ದೇವೆ . ಮಳೆಗಾಲವು ತನ್ನ ಯವ್ವನಾವಸ್ಥೆಯನ್ನು ತಲುಪಿತ್ತು . ಮಳೆನಾಡಿನ ಮಳೆಯನ್ನು ಹೇಳಿಕೇಳಿಯಲ್ಲದೆ ಅನುಭವಿಸಿಯೇ ತಿಳಿಯಬೇಕು .ಅಲ್ಲಿ ಚತ್ರಿ, ಟೊಪ್ಪಿಗೆಗಳು ನೆಪಮಾತ್ರ, ಅವ್ಯಾವುವೂ ತಡೆಯಲ್ಲ. ಆ ದಿನ ಬಂದ ಮಳೆ, ಪತ್ರಿಕೆಗಳಲ್ಲಿ ವಿಶೇಷವಾಗಿ ಉಲ್ಲೇಖಿಸಲ್ಪಟ್ಟಿತ್ತು. ಅಂಥಾ ಮಳೆ ಅದು. ಬಿಸಿಲಲ್ಲಿ ಒಣಗಿ, ತಾಯಿಸೀತೆಯ ನೀರನ್ನು ಕೊಡಿದು, ಒಮ್ಮಿಂದೊಮ್ಮೆಲೇ ಎರಗಿಬಂದ ಮಳೆಗೆ ತಲೆಬಾಗಿ, ತೋಯ್ದು ತೊಪ್ಪೆಯಾಗಿ ಉಡುಪಿ ಸೇರುವಹೊತ್ತಿಗೆ ಸಂಜೆ ಎಂಟ್ಹಾಗಿತ್ತು. ಆಶ್ಚರ್ಯವೆಂಬಂತೆ ನನ್ನ ತಲೆಯೇರಿ ಕೂತ್ತಿದ ಜ್ವರ ಹೇಳ ಹೆಸರಿಲ್ಲದಂತೆ ಮಾಯಾವಾಗಿತ್ತು. ಎಲ್ಲಿ ನಾನು ಅನಾರೋಗ್ಯದಿಂದ ಮಲಗುತ್ತೇನೋ ಎಂದು ಎದರಿದ್ದೆ. ಹಾಗೇನೂ ಆಗದೇ

ಸಂಪೂರ್ಣ ಗುಣಮುಖನಾಗಿದ್ದೆ. ನಮ್ಮಲ್ಲಿ ಪ್ರಕೃತಿಯನ್ನ, ಗಿಡ, ಮರ, ನದಿ ಇವನ್ನೆಲ್ಲಾ ತಾಯಿ ಅಂತ ಕರೆದರು, ದೇವರು ಅಂತ ಪೂಜಿಸಿದ್ರು, ನಿಜಕ್ಕೂ ಆಕೆ ಅದಕ್ಕೆ ಅರ್ಹಳು.

ಮಳೆನಾಡಿನ ಮಣ್ಣೇ ಹಾಗೆ, ನಿಮಗೆ ಪ್ರತಿ ಅಂಗುಲಕ್ಕೂ ಒಂದೊಂದು ಜೀವ ಸೃಷ್ಟಿಯ ವೈಚಿತ್ರ್ಯಗಳನ್ನ ತೋರಿಸುತ್ತ, ನಿಮ್ಮನ್ನು ಬೆರಗೊಳಿಸುತ್ತದೆ. ಬೆಟ್ಟ-ಗುಡ್ಡಗಳ ಸಾಲು, ಹೆಪ್ಪುಗಟ್ಟಿನಿಂತ ಹಸಿರು, ಮೈ ಭಾರೈಸಿ ನಲ್ಲನ ಎದೆಗೆ ಒರಗಿ ಮಲಗಿದಂತೆ ಕಾಣುವ ದಟ್ಟ ಮೋಡಗಳು, ಅಲ್ಲಲ್ಲೆ ಸಣ್ಣ ಮಕ್ಕಳಂತೆ ಕಿಲಕಿಲ ನಗುತ್ತ ಓಡುವ ಝರಿಗಳು, ಕಲ್ಲೆದೆಯನ್ನೂ ಕರಗಿಸುವಂತೆ ಧುಮ್ಮಿಕ್ಕುವ ಜಲಪಾತಗಳು. . . .ಎಂಥಾ ಜಡಕ್ಕೂ ಜೀವ ಕಳೆಯನ್ನ ತುಂಬುತ್ತವೆ. ನನ್ನನ್ನು ಅತಿಯಾಗಿ ಅಕರ್ಶಿಸಿದ ಅಲ್ಲಿನ ದೃಷ್ಯಗಳಲ್ಲಿ ಒಂದು ಮೋಡಗಳ ಚನ್ನಾಟ. ಬೀಸುವ ಗಾಳಿಗೆ ಹತ್ತಿಯ ಉಂಡೆಗಳಂತೆ ಉರುಳುತ್ತಾ ಕ್ಷಣಕ್ಕೊಂದು ಚಿತ್ತಾರವನ್ನು ಮೂಡಿಸುತ್ತ, ನೋಡು ನೋಡುತ್ತಿದಂತೆ ಜಗವನ್ನೆಲ್ಲ ನುಂಗಿ ಶೂನ್ಯಗೊಳಿಸಿ, ಮತ್ತೊಮ್ಮೆ ತಾನು ಶೂನ್ಯದಲ್ಲಿ ಲೀನವಾಗುವ ಆ ಆಟ ನೋಡಲಿಕ್ಕೆ ಎರಡು ಕಣ್ಣು ಸಾಲದು.

ಪ್ರಕೃತಿಯಲ್ಲಿ ಆ ಮೇಘ ಗಿರಿಗಳು ಅಮೂರ್ತ ಪ್ರೇಮಕ್ಕೆ ಸಾಕ್ಷಿಯಾಗುತ್ತಾರೆ ಜೀವಸೃಷ್ಟಿಗೆ ನಾಂದಿಯಾಗುತ್ತಾರೆ ಈ ಕವನಕ್ಕೆ ಅವರೇ ಸ್ಫೂರ್ತಿ. ಇದು ಆ ಪ್ರೇಮಿಗಳಿಗೆ ಅರ್ಪಣೆ.

ತೇಲಿಬಂದ ಮುಗಿಲಿಗೆ
ಗಿರಿಯು ಮುತ್ತಿಕ್ಕಿ,
ಮುಗಿಲ ಮೈ ಹಗುರಾಗಿ,
ಕೋಲ್ಮಿಂಚು ಹರಿದಾಡಿ
ಸಣ್ಣಗೆ ಮೈ ನಡುಗಿ
ಬಿಸಿಗೆ ಹಾಗೆ ಗುಡುಗಿ
ಮೆಲ್ಲ ಮೆಲ್ಲಗೆ ಕರಗಿ
ನೀರಾಗಿ ಹನಿದು
ಮಿಲನದ ಕುರುಹಾಗಿ
ಝರಿಯಾಗಿ ಹರಿದು
ಪ್ರೌಢತೆಯ ಮೆರೆದು
ಕಡಲಂದದಿ ಮೊರೆದು
ತೇಲಿ,ಹಾರಾಡಿ ಮುಗಿಲಾಗಿ
ನಿಂತವಳಿಗೆ, ಮತ್ತೆ ಕಾದಿತ್ತು
ಗಿರಿಯ ಮುತ್ತು . . . . . .

– ಶಂತನ್.ಕೆ.ಬಿ
ಶಿವಮೊಗ್ಗ

